# ಎದೆಗೆ ಗುಂಡೇಟು.

--------------------------

-- ಹುಚ್ಚಂಗಿ ಪ್ರಸಾದ್

ಪೆನ್ನಿನ ಎದೆಗೆ
ಗುಂಡಿನ ಏಟು ಕೊಟ್ಟ
ಶತ ಷಂಡರೇ..
ಕೊಂದು ಸಂಭ್ರಮಿಸುವ
ನರ ಹಂತಕರೆ.

ಗುಂಡು ಬೀಳುವ
ನಿಮ್ಮ ಬಂದೂಕಿನ
ತುತ್ತ ತುದಿಯಲಿ
ಗುಬ್ಬಚ್ಚಿ ಗೂಡು ಕಟ್ಟಲಿ.

ಸಿಡಿದ ಗುಂಡಿಗೆ
ನೆಲಕ್ಕುರುಳಿ ಬಿದ್ದಿದ್ದ
ಬರೀ ದೇಹವಲ್ಲ
ನೆಲದ ತಾಯಿಯ ಮಾತೃಕೆ
ಅಕ್ಷರದ ಜೀವಂತಿಕೆ.

ಅಲ್ಲೆಲ್ಲಾ ಚಲ್ಲಿದ್ದು
ರಕ್ತವಲ್ಲ...!
ಸತ್ಯದ ಚರಿತ್ರೆಯ
ಗಟ್ಟಿಗೊಳಿಸುವ
ಪೆನ್ನಿನ ಹಸಿಹಸಿ ಮಸಿ.

ಹನಿಹನಿ ರಕ್ತದ ಕಣಗಳೆಲ್ಲಾ
ಸಾವಿರ ಸತ್ಯಗಳಾಗಿ
ಮತ್ತೆ ಪುನರ್ ಜೀವನಗಂಡಿವೆ.

ಗೊತ್ತು ಬಿಡಿ...ಭಕ್ತರೆ..
ಶಂಬೂಕನ ತಲೆ ಕಡಿದ ಕತ್ತಿ
ಏಕಲವ್ಯನ ಹೆಬ್ಬೆರಳ ಕೊಯ್ದ ಕೈ
ಇಂದು ಬಂದೂಕಾಗಿ
ನನ್ನ ಕೊಂದಿದೆ.

ಮಣ್ಣಲ್ಲಿ ಸುಳ್ಳಿನ ಗೆದ್ದಲಿಡಿಯುತ್ತಿಲ್ಲ
ಮೊಳಕೆ ಹೊಡೆದು
ಸತ್ಯದ ಹೆಮ್ಮರವಾಗುತಿದ್ದೇನೆ.
ಒಂದೆರೆಡು ಗನ್ನುಗಳಿಗೆ

ಸಾವಿರ ಪೆನ್ನಾಗುತ್ತಿದ್ದೇನೆ..